ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2026-27ನೇ ಸಾಲಿನಿಂದ ವಿವಿಧ ಹಂಗಾಮುಗಳ ಬೆಳೆ ವಿಮೆ ಪ್ರಸ್ತಾವನೆಗಳನ್ನು ಬೆಳೆ ಸಮೀಕ್ಷೆಯ ವರದಿಯೊಂದಿಗೆ ಹೋಲಿಸಿ ಪರಿಗಣಿಸುವ ಕುರಿತು.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ:ಕೃಇ 77 ಕೃಕ್ಕೈಉ 2019, ದಿನಾಂಕ:08.11.2019.

2. ಸರ್ಕಾರದ ಆದೇಶ ಸಂಖ್ಯೆ: ಕೃಇ 34 ಕೃಕ್ಕೈಉ 2019 ಮತ್ತು ಕೃಇ 34 ಕೃಕ್ಕೈಉ 2019(1) ಮತ್ತು ಕೃಇ 34 ಕೃಕ್ಕೈಉ 2019(2), ದಿನಾಂಕ:05.07.2019.

3. ಸರ್ಕಾರದ ಆದೇಶ ಸಂಖ್ಯೆ: ಕೃಇ 83 ಕೃಕ್ಕೈಉ 2020, ದಿನಾಂಕ:07.08.2020.

4. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ:13012/04/2017-Credit-II(Pt), ದಿನಾಂಕ:14.08.2020 ಮತ್ತು 11.09.2020.

5. ಸರ್ಕಾರದ ಆದೇಶ ಸಂಖ್ಯೆ: AGRI-AAE/43/2021, ದಿನಾಂಕ:08.04.2021.

6. ಸರ್ಕಾರದ ಆದೇಶ ಸಂಖ್ಯೆ: ಕೃಇ 18 ಎಎಇ 2023, ದಿನಾಂಕ:21.07.2023.

7. ಸರ್ಕಾರದ ಆದೇಶ ಸಂಖ್ಯೆ: ಕೃಇ 18 ಎಎಇ 2023, ದಿನಾಂಕ:23.04.2026.

8. ಆಯುಕ್ತರು ಕೃಷಿ ಇಲಾಖೆ ರವರ ಪತ್ರ ಸಂಖ್ಯೆ:ಜಕೃನಿ(ಬೆವಿ)/PMFBY/ಮುಂ2026/ಅಧಿಸೂಚನೆ/10/2026-27, ದಿನಾಂಕ:12.06.2026.

*****

ಪ್ರಸ್ತಾವನೆ:

ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯು ಭಾರತ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾಗಿದ್ದು, ನೈಸರ್ಗಿಕ ವಿಕೋಪಗಳು ಅಥವಾ ಕೀಟ ಮತ್ತು ರೋಗಗಳ ಪರಿಣಾಮವಾಗಿ ಯಾವುದೇ ಅಧಿಸೂಚಿಸಿದ ಬೆಳೆ ವಿಫಲವಾದಾಗ ರೈತರಿಗೆ ವಿಮಾ ರಕ್ಷಣೆಯನ್ನು ಮತ್ತು ಹಣಕಾಸಿನ ಬೆಂಬಲವನ್ನು ನೀಡುವುದು ಮತ್ತು ರೈತರ ಆದಾಯವನ್ನು ಸ್ಥಿರಗೊಳಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿರುತ್ತದೆ. ಈ ಯೋಜನೆಯನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿ ಹಾಗೂ ಕಾಲಕಾಲಕ್ಕೆ ಹೊರಡಿಸಲಾಗುವ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಆದೇಶಗಳನ್ವಯ ಅನುಷ್ಠಾನಗೊಳಿಸಲಾಗುತ್ತಿದೆ.

ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ 2018ರ ಮುಂಗಾರು ಹಂಗಾಮಿಗೆ ಸಂಬಂಧಿಸಿದಂತೆ ನಡೆಸಲಾದ ಬೆಳೆ ಸಮೀಕ್ಷೆ ಮಾಹಿತಿಯನ್ನು 2018ರ ಮುಂಗಾರು ಹಂಗಾಮಿನ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ ಮತ್ತು ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ ನೋಂದಣಿಯಾದ ಬೆಳೆ ವಿಮೆ ಪ್ರಸ್ತಾವನೆಗಳಿಗೆ ಕೆಲವು ತತ್ವ ಮತ್ತು ವಿಧಾನಗಳನ್ನು ಅನುಸರಿಸಿ ಬೆಳೆ ಹೊಂದಾಣಿಕೆ ಮಾಡಲು ಅನುಮತಿಸಲಾಗಿರುತ್ತದೆ.

ಮೇಲೆ ಓದಲಾದ (2) ಮತ್ತು (3)ರ ಸರ್ಕಾರದ ಆದೇಶಗಳಲ್ಲಿ 2019-20 ಮತ್ತು 2020-21ನೇ ಸಾಲಿನಿಂದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ) ಯಿಂದ ಸಿದ್ಧಪಡಿಸಲಾದ ಮೊಬೈಲ್ ಆಪ್ ಮೂಲಕ ಜಿಲ್ಲಾಧಿಕಾರಿಗಳ ನೇರ ಉಸ್ತುವಾರಿಯಲ್ಲಿ ಬೆಳೆ ಸಮೀಕ್ಷೆಯನ್ನು ನಡೆಸಲು ಅನುಮೋದನೆ ನೀಡಲಾಗಿರುತ್ತದೆ. ಅಲ್ಲದೆ, ಬೆಳೆ ಸಮೀಕ್ಷೆ ಯೋಜನೆಯ ಅನುಷ್ಠಾನಕ್ಕಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಉಸ್ತುವಾರಿ ಸಮಿತಿಯನ್ನು ಹಾಗೂ ಕಾರ್ಯಕ್ರಮದ ಮೇಲ್ವಿಚಾರಣೆಗಾಗಿ ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ ಉಪ ಸಮಿತಿಯನ್ನು ರಚಿಸಲಾಗಿರುತ್ತದೆ. ಅಲ್ಲದೆ, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಸಮಿತಿ ಹಾಗೂ ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮಟ್ಟದ ಸಮಿತಿಯನ್ನು ರಚಿಸಲಾಗಿರುತ್ತದೆ.

ಮೇಲೆ ಓದಲಾದ (4)ರ ಕೇಂದ್ರ ಸರ್ಕಾರದ ಪತ್ರಗಳಲ್ಲಿ, 2019ರ ಮುಂಗಾರು ಹಂಗಾಮಿನಿಂದ ಅನ್ವಯವಾಗುವಂತೆ ಬೆಳೆ ಸಮೀಕ್ಷೆ ಮಾಹಿತಿಯನ್ನು ಬಳಸಿ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ ಮತ್ತು ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ ನೋಂದಣಿಯಾದ ಬೆಳೆ ವಿಮೆ ಪ್ರಸ್ತಾವನೆಗಳಿಗೆ ವಿಮಾ ಪರಿಹಾರ ನೀಡಲು, ಬೆಳೆ ಸಮೀಕ್ಷೆ ವರದಿ ಲಭ್ಯತೆ ಮೇರೆಗೆ ಬೆಳೆ ವಿಮೆ ಪರಿಹಾರ ನೀಡುವಲ್ಲಿ ಕೆಲವೊಂದು ವಿನಾಯಿತಿಗಳನ್ನು ಸಂರಕ್ಷಣೆ ತಂತ್ರಾಂಶದಲ್ಲಿ ಅಳವಡಿಸಿಕೊಳ್ಳಲು ಹಾಗೂ ರೈತರ ದೂರುಗಳನ್ನು ನಿಗದಿತ ಸಮಯದಲ್ಲಿ ಪರಿಹರಿಸಲು ಸೂಚಿಸಿ ಅನುಮತಿಯನ್ನು ನೀಡಲಾಗಿರುತ್ತದೆ. ಈ ಅನುಮತಿಯು ಮುಂದಿನ ಹಂಗಾಮುಗಳು ಮತ್ತು ವರ್ಷಗಳಿಗೂ ಅನ್ವಯಿಸುತ್ತದೆ.

ಮೇಲೆ ಓದಲಾದ (5)ರ ಸರ್ಕಾರದ ಆದೇಶದಲ್ಲಿ 2018ರ ಮುಂಗಾರು ಹಂಗಾಮಿನಲ್ಲಿ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ ಮತ್ತು ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ ನೋಂದಣಿಯಾದ ಬೆಳೆ ವಿಮೆ ಪ್ರಸ್ತಾವನೆಗಳಿಗೆ ಬೆಳೆ ಹೊಂದಾಣಿಕೆ ಮಾಡುವ ಸಲುವಾಗಿ ಹೊರಡಿಸಿರುವ ಮೇಲೆ ಓದಲಾದ (1)ರ ಆದೇಶದಲ್ಲಿನ ಕೆಲವು ತತ್ವ ಮತ್ತು ವಿಧಾನಗಳೂ ಒಳಗೊಂಡಂತೆ ಇನ್ನೂ ಕೆಲವು ಅಂಶಗಳನ್ನು ಸೇರ್ಪಡೆಗೊಳಿಸಿ, 2019ನೇ ಸಾಲಿನ ಮುಂಗಾರು ಹಂಗಾಮಿನಿಂದ ಮುಂದಿನ ಆದೇಶದವರೆಗೆ ಬೆಳೆವಿಮೆ ಪ್ರಸ್ತಾವನೆಗಳನ್ನು ಬೆಳೆ ಸಮೀಕ್ಷೆಯ ವರದಿಯೊಂದಿಗೆ ಹೋಲಿಸಿ ಪರಿಗಣಿಸಲು ಅನುಮತಿ ನೀಡಲಾಗಿರುತ್ತದೆ.

ಮೇಲೆ ಓದಲಾದ (6)ರ ಸರ್ಕಾರದ ಆದೇಶದಲ್ಲಿ ಬೆಳೆವಿಮೆ ಪ್ರಸ್ತಾವನೆಗಳನ್ನು ಬೆಳೆ ಸಮೀಕ್ಷೆಯ ವರದಿಯೊಂದಿಗೆ ಹೋಲಿಸಿ ಪರಿಗಣಿಸಲು ಅನುಮತಿಸಲಾದ ಮೇಲೆ ಓದಲಾದ (1) ಮತ್ತು (5)ರ ಸರ್ಕಾರದ ಆದೇಶಗಳನ್ನು ಮುಂದುವರೆಸುತ್ತಾ, ಸದರಿ ಆದೇಶಗಳಿಗೆ ಈ ಕೆಲವು ತತ್ವ ಮತ್ತು ವಿಧಾನಗಳನ್ನು ಸೇರ್ಪಡೆಗೊಳಿಸಿ, 2023-24ನೇ ಸಾಲಿನ ಪೂರ್ವ

ಮುಂಗಾರು, ಮುಂಗಾರು, ಹಿಂಗಾರು ಮತ್ತು ಬೇಸಿಗೆ ಹಂಗಾಮಿಗೆ ಮಾತ್ರ ಅನ್ವಯವಾಗುವಂತೆ ಬೆಳೆ ಸಮೀಕ್ಷೆ ವರದಿಯನ್ನು ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಡಿ ನೋಂದಣಿಯಾದ ಬೆಳೆ ವಿಮೆ ಪ್ರಸ್ತಾವನೆಗಳಿಗೆ ಬೆಳೆ ಹೊಂದಾಣಿಕೆ ಮಾಡಲು ಅನುಮತಿ ನೀಡಲಾಗಿರುತ್ತದೆ.

ಮೇಲೆ ಓದಲಾದ (7)ರ ಸರ್ಕಾರದ ಆದೇಶದಲ್ಲಿ ಬೆಳೆವಿಮೆ ಪ್ರಸ್ತಾವನೆಗಳನ್ನು ಬೆಳೆ ಸಮೀಕ್ಷೆಯ ವರದಿಯೊಂದಿಗೆ ಹೋಲಿಸಿ ಪರಿಗಣಿಸಲು ಅನುಮತಿಸಲಾದ ಮೇಲೆ ಓದಲಾದ (1), (5) ಮತ್ತು (6)ರ ಸರ್ಕಾರದ ಆದೇಶಗಳನ್ನು ಮುಂದುವರೆಸುತ್ತಾ, 2024-25ನೇ ಸಾಲಿನಿಂದ ಅನ್ವಯವಾಗುವಂತೆ ಹಾಗೂ ಮುಂದಿನ ಆದೇಶದವರೆಗೆ ಬೆಳೆ ಸಮೀಕ್ಷೆ ವರದಿಯನ್ನು ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಡಿ ನೋಂದಣಿಯಾದ ಬೆಳೆ ವಿಮೆ ಪ್ರಸ್ತಾವನೆಗಳಿಗೆ ಬೆಳೆ ಹೊಂದಾಣಿಕೆ ಮಾಡಲು ಅನುಮತಿ ನೀಡಲಾಗಿರುತ್ತದೆ.

ಮೇಲೆ ಓದಲಾದ (8)ರ ಕೃಷಿ ಆಯುಕ್ತರ ಪ್ರಸ್ತಾವನೆಯಲ್ಲಿ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ದಿನಾಂಕ:29.04.2026 ರಂದು ನಡೆದ ರಾಜ್ಯ ಮಟ್ಟದ ಬೆಳೆ ವಿಮೆ ಸಮನ್ವಯ ಸಮಿತಿ (SLCCCI) ಸಭೆಯಲ್ಲಿ ಈ ಹಿಂದಿನ ಆದೇಶಗಳಲ್ಲಿ ಹೊರಡಿಸಲಾಗಿರುವ ಕೆಲವೊಂದು ವಿನಾಯಿತಿಗಳನ್ನು ಮುಂದುವರೆಸುವಂತೆ ಹಾಗೂ ಕೆಲವೊಂದು ವಿನಾಯಿತಿಗಳನ್ನು ಕೈಬಿಡುವಂತೆ ತೀರ್ಮಾನಿಸಲಾಗಿದ್ದು, ಅದರಂತೆ, ಈ ಕೆಳಕಂಡ ಅಂಶಗಳನ್ನು ಅಳವಡಿಸಿಕೊಂಡು 2026-27ನೇ ಸಾಲಿನಿಂದ ಬೆಳೆ ವಿಮೆ ಯೋಜನೆಯಡಿ ನೋಂದಾಯಿಸಿದ ಬೆಳೆಗಳನ್ನು ಬೆಳೆ ಸಮೀಕ್ಷೆಯ ವರದಿಯೊಂದಿಗೆ ಪರಿಗಣಿಸಲು ಸರ್ಕಾರದ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

1. ಪಾಳು/ಕಟಾವು ಪ್ರದೇಶ ಎಂದು ಬೆಳೆ ಸಮೀಕ್ಷೆಯ ವರದಿಯಲ್ಲಿ ಕಂಡು ಬಂದ ಸರ್ವೆ ನಂಬರ್ ಗಳ ಬೆಳೆ ವಿಮೆಯಡಿ ನೋಂದಾಯಿಸಿದ ಪ್ರಸ್ತಾವನೆಗಳಿಗೆ ವಿನಾಯಿತಿ ಇರುವುದಿಲ್ಲ.

2. ಬೆಳೆಯ ವಿಸ್ತೀರ್ಣದ ಮಾಹಿತಿ: ಬೆಳೆ ಸಮೀಕ್ಷೆಯ ವರದಿಯಲ್ಲಿ ದಾಖಲಾದ ಬೆಳೆಯ ಹೆಸರಿನ ಜೊತೆಗೆ ಬೆಳೆ ಸಮೀಕ್ಷೆಯ ವರದಿಯಲ್ಲಿ ದಾಖಲಾದ ಬೆಳೆಯ ವಿಸ್ತೀರ್ಣವನ್ನೂ ಪರಿಗಣಿಸಿ ಹೊಂದಾಣಿಕೆ ಮಾಡಲಾಗುವುದು. ವಿಮೆ ಮಾಡಿಸಲಾದ ವಿಸ್ತೀರ್ಣಕ್ಕಿಂತ ಬೆಳೆ ಸಮೀಕ್ಷೆಯ ಪ್ರಕಾರ ಬಿತ್ತನೆ ಮಾಡಿದ ವಿಸ್ತೀರ್ಣವು ಕಡಿಮೆಯಿದ್ದಲ್ಲಿ ಗರಿಷ್ಠ 25% ಅಥವಾ 1 ಎಕರೆ ಹೆಚ್ಚುವರಿ ಪ್ರದೇಶದವರಿಗೆ ಮಾತ್ರ ವಿನಾಯಿತಿಯಿರುತ್ತದೆ. ಉದಾಹರಣೆಗೆ: ವಿಮೆ ಮಾಡಿಸಲಾದ ವಿಸ್ತೀರ್ಣವು 2 ಎಕರೆ ಆಗಿದ್ದು, ಬೆಳೆ ಸಮೀಕ್ಷೆಯ ಪ್ರಕಾರ ಬಿತ್ತನೆ ಮಾಡಿದ ವಿಸ್ತೀರ್ಣವು 1 ಎಕರೆ ಆಗಿದ್ದರೆ, ಬೆಳೆ ಸಮೀಕ್ಷೆಯಲ್ಲಿ ದಾಖಲಾದ ಬಿತ್ತನೆ ವಿಸ್ತೀರ್ಣಕ್ಕಿಂತ ಗರಿಷ್ಠ ಶೇಕಡಾ 25 ರಷ್ಟು ಹೆಚ್ಚುವರಿ ವಿಸ್ತೀರ್ಣಕ್ಕೆ, ಅಂದರೆ ಗರಿಷ್ಠ 1.25 ಎಕರೆಯವರೆಗೆ ಪರಿಹಾರವನ್ನು ವಿಸ್ತರಿಸಲಾಗುವುದು. ವಿಮೆ ಮಾಡಿಸಲಾದ ವಿಸ್ತೀರ್ಣವು ಹೆಚ್ಚಾಗಿದ್ದರೆ, ಉದಾಹರಣೆಗೆ: ವಿಮೆ ಮಾಡಿಸಲಾದ ವಿಸ್ತೀರ್ಣವು 20 ಎಕರೆ ಆಗಿದ್ದು, ಬೆಳೆ ಸಮೀಕ್ಷೆಯ ಪ್ರಕಾರ ಬಿತ್ತನೆ ಮಾಡಿದ ವಿಸ್ತೀರ್ಣವು 10 ಎಕರೆ ಆಗಿದ್ದರೆ, ಪರಿಹಾರವನ್ನು ಬಿತ್ತನೆ ವಿಸ್ತೀರ್ಣದ ಶೇಕಡಾ 25 ಕ್ಕಿಂತ ಹೆಚ್ಚು ಅಥವಾ 1 ಎಕರೆ, ಇವೆರಡರಲ್ಲಿ ಯಾವುದು ಕಡಿಮೆಯೋ ಅಷ್ಟಕ್ಕೆ ಸೀಮಿತಗೊಳಿಸಲಾಗುವುದು. ಅಂದರೆ 10+1=11 ಎಕರೆಗಳನ್ನು ಪರಿಗಣಿಸಲಾಗುವುದು.

3. ಬೆಳೆ ವಿಮೆ ಪ್ರಸ್ತಾವನೆಗಳಲ್ಲಿ ಯಾವುದಾದರೂ ಒಂದು ಹಿಸ್ಸಾದಲ್ಲಿ ವಿಮೆಗೆ ನೋಂದಾಯಿಸಿದ್ದು, ಬೆಳೆ ಸಮೀಕ್ಷೆ ಪ್ರಕಾರ ಅದೇ ಹಿಸ್ಸಾದಲ್ಲಿ ಬೆಳೆ ಬೆಳೆದಿದ್ದಲ್ಲಿ ಮಾತ್ರ

ಪರಿಗಣಿಸಲಾಗುವುದು. ಒಂದು ವೇಳೆ ನೊಂದಾಯಿತ ಬೆಳೆಯು ಅದೇ ಸರ್ವೆ ನಂಬರ್ ನ ಇತರೆ ಹಿಸ್ಸಾಗಳಲ್ಲಿ ಕಂಡು ಬಂದಲ್ಲಿ, ಅಂತಹ ಪ್ರಸ್ತಾವನೆಗಳಿಗೆ ವಿನಾಯಿತಿ ಇರುವುದಿಲ್ಲ.

4. ಬೆಳೆ ವಿಮೆಯಡಿ ಒಂದು ಪ್ರಸ್ತಾವನೆಯಲ್ಲಿ ಒಂದಕ್ಕಿಂತ ಹೆಚ್ಚು ಸರ್ವೇ ನಂಬರ್ ಗಳು ಇದ್ದಲ್ಲಿ, ಬೆಳೆ ವಿಮೆಯಡಿ ನೊಂದಾಯಿಸಲ್ಪಟ್ಟ ಎಲ್ಲಾ ಸರ್ವೆ ನಂಬರ್ ಗಳಲ್ಲೂ ಸಹ ಬೆಳೆ ಸಮೀಕ್ಷೆ ಪ್ರಕಾರ ಬೆಳೆ ದಾಖಲಾದಲ್ಲಿ ಮಾತ್ರ ಪರಿಗಣಿಸಲಾಗುವುದು. ಒಂದು ವೇಳೆ ಯಾವುದೇ ಒಂದು ಸರ್ವೆ ನಂಬರ್ ನಲ್ಲಿ ನೊಂದಾಯಿಸಿದ ಬೆಳೆಯು ಬೆಳೆ ಸಮೀಕ್ಷೆಯಲ್ಲಿ ದಾಖಲಾದ ಬೆಳೆಯೊಂದಿಗೆ ತಾಳೆಯಾಗದಿದ್ದಲ್ಲಿ ಅಂತಹ ಸರ್ವೇ ನಂಬರ್ ಗಳನ್ನು ಬೆಳೆ ವಿಮೆ ಪರಿಹಾರಕ್ಕಾಗಿ ಅರ್ಹವಲ್ಲವೆಂದು ಪರಿಗಣಿಸಲಾಗುವುದು.

5. ಯಾವುದೇ ಗ್ರಾಮದ ಗಣಕೀಕೃತ ಗ್ರಾಮ ನಕ್ಷೆ ಲಭ್ಯತೆ ಇಲ್ಲದಿದ್ದಲ್ಲಿ/ Geo-referenced map ಇಲ್ಲದಿದ್ದಲ್ಲಿ/ ಗ್ರಾಮ ನಕ್ಷೆ ಬೆಳೆ ಸಮೀಕ್ಷೆಗೆ ಬಳಕೆ ಮಾಡದಿದ್ದಲ್ಲಿ, ವಿಮೆಗೆ ನೋಂದಾಯಿಸಿದ ಬೆಳೆಯನ್ನು ಬೆಳೆ ಸಮೀಕ್ಷೆ ವರದಿಯೊಂದಿಗೆ ಹೋಲಿಸಿ ಪರಿಗಣಿಸಲು ಸಾಧ್ಯವಿರುವುದಿಲ್ಲ. ಅಂತಹ ಸಂದರ್ಭದಲ್ಲಿ, ಅಂತಹ ಗ್ರಾಮಗಳ ಎಲ್ಲಾ ಪ್ರಸ್ತಾವನೆಗಳನ್ನು ಸಂಪೂರ್ಣವಾಗಿ ಸಿಂಧುವೆಂದು ಪರಿಗಣಿಸಲಾಗುವುದು.

6. ಬೆಳೆ ಸಮೀಕ್ಷೆಯಲ್ಲಿ ಒಂದು ಭಾಗದಲ್ಲಿ "ಕೃಷಿಯೇತರ ಭೂಮಿ" ಇದ್ದು, ಉಳಿದ ಭಾಗಗಳಲ್ಲಿ ಬೆಳೆ ಬೆಳೆದಿದ್ದರೆ ಅಂತಹ ಪ್ರಸ್ತಾವನೆಗಳಲ್ಲಿನ ಬೆಳೆಗಳು ಯಾವುದಾದರು ವಿನಾಯತಿಗಳ ಅಡಿಯಲ್ಲಿ ಬಂದಲ್ಲಿ ಅಂತಹ ಪ್ರಸ್ತಾವನೆಗಳನ್ನು ಸಿಂಧುವೆಂದು ಪರಿಗಣಿಸಲಾಗುವುದು.

7. ಬೆಳೆ ಸಮೀಕ್ಷೆ ವರದಿಯಲ್ಲಿರುವ ಬೆಳೆ ಹಾಗೂ ವಿಮೆಗೆ ನೋಂದಾಯಿಸಿದ ಬೆಳೆಯನ್ನು ಹೋಲಿಕೆ ಮಾಡಿದಾಗ ನೀರಾವರಿ ಪ್ರಕಾರವನ್ನು (ಮಳೆಯಾಶ್ರಿತ ಅಥವಾ ನೀರಾವರಿ) ಪರಿಗಣಿಸಲಾಗುವುದಿಲ್ಲ.

8. ಬಿತ್ತನೆ ವೈಫಲ್ಯದಿಂದ Prevented Sowing risk ಘೋಷಿಸಿದಲ್ಲಿ, ಸದರಿ ವಿಮಾ ಘಟಕದಲ್ಲಿ ಬೆಳೆ ಬಿತ್ತನೆಯಾಗಿರುವುದಿಲ್ಲ ಮತ್ತು ವಿಮೆಗೆ ನೋಂದಾಯಿಸಿದ ಬೆಳೆಯನ್ನು ಬಿತ್ತನೆ ಮಾಡುವ ಯಾವುದೇ ಸಾಧ್ಯತೆಗಳಿರುವುದಿಲ್ಲ. ಇದಲ್ಲದೆ ಅಂತಹ ಪ್ರಸ್ತಾವನೆಗಳಿಗೆ ಬೆಳೆ ಹಂಗಾಮಿಗಿಂತ ಮುಂಚಿತವಾಗಿಯೇ ವಿಮೆ ಇತ್ಯರ್ಥಪಡಿಸಲಾಗಿರುತ್ತದೆ.

9. ವಿಮಾ ಘಟಕದಡಿ ವಿಮೆಗೆ ನೋಂದಾಯಿಸಿದ ಬೆಳೆಯನ್ನು "ಮಧ್ಯಂತರ ಪ್ರತಿಕೂಲತೆಗಳು/ವಿಪತ್ತುಗಳು" ಅಡಿ ಬೆಳೆ ವಿಮೆ ಪರಿಹಾರಕ್ಕಾಗಿ ಪರಿಗಣಿಸಿದ್ದಲ್ಲಿ, ಅಂತಹ ಪ್ರಸ್ತಾವನೆಗಳನ್ನು ಬೆಳೆ ಸಮೀಕ್ಷೆ ಮಾಹಿತಿಯೊಂದಿಗೆ ಹೋಲಿಕೆ ಮಾಡದೆ ಸಿಂಧುವೆಂದು ಪರಿಗಣಿಸಲಾಗುವುದು.

10. ಕ್ರಮ ಸಂಖ್ಯೆ 9 ರಲ್ಲಿ ಮಧ್ಯಂತರ ಪ್ರತಿಕೂಲ ಬಂದಂತಹ/ ಅನುಭವಿಸುವಂತಹ ಪ್ರಕರಣಗಳಿಗೆ ವಿನಾಯಿತಿ ನೀಡಿದಂತೆ Localized calamity ಮತ್ತು ಕೊಯ್ಲಿನೋತ್ತರ ಪ್ರತಿಕೂಲಗಳಡಿ (Post harvest Loss) ಪರಿಗಣಿಸಲಾಗುವ ಪ್ರಸ್ತಾವನೆಗಳನ್ನು ಬೆಳೆ ಸಮೀಕ್ಷೆ ಮಾಹಿತಿಯೊಂದಿಗೆ ಹೋಲಿಕೆ ಮಾಡದೆ ಸಿಂಧುವೆಂದು ಪರಿಗಣಿಸಲಾಗುವುದು.

11. ಬಹುವಾರ್ಷಿಕ ಬೆಳೆಗಳಿಗೆ ಸಂಬಂಧಿಸಿದಂತೆ, ನೋಂದಣಿ ಸಮಯದಲ್ಲಿಯೇ ಬೆಳೆ ವಿಮೆಯಡಿ ನೋಂದಾಯಿತ ಬೆಳೆಯನ್ನು ಬೆಳೆ ಸಮೀಕ್ಷೆ ವರದಿಯೊಂದಿಗೆ ತಾಳೆಮಾಡಿಕೊಳ್ಳಲಾಗುವುದು.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಕೃಇ 18 ಎಎಇ 2023, ಬೆಂಗಳೂರು, ದಿನಾಂಕ: 30-06-2026.

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಅಂಶಗಳ ಹಿನ್ನೆಲೆಯಲ್ಲಿ, 2026-27ನೇ ಸಾಲಿನಿಂದ ಅನ್ವಯವಾಗುವಂತೆ ಹಾಗೂ ಮುಂದಿನ ಆದೇಶದವರೆಗೆ ಈ ಕೆಳಕಂಡ ವಿನಾಯಿತಿಗಳು ಹಾಗೂ ಷರತ್ತುಗಳನ್ನು ಅಳವಡಿಸಿಕೊಂಡು ಆಯಾ ಹಂಗಾಮುಗಳ ಬೆಳೆ ಸಮೀಕ್ಷೆ ವರದಿಯನ್ನು ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಡಿ ಆಯಾ ಹಂಗಾಮುಗಳಲ್ಲಿ ನೋಂದಣಿಯಾದ ಬೆಳೆ ವಿಮೆ ಪ್ರಸ್ತಾವನೆಗಳಿಗೆ ಬೆಳೆ ಹೊಂದಾಣಿಕೆ ಮಾಡಲು ಅನುಮತಿ ನೀಡಿ ಆದೇಶಿಸಿದೆ.

1. ಪಾಳು/ಕಟಾವು ಪ್ರದೇಶ ಎಂದು ಬೆಳೆ ಸಮೀಕ್ಷೆಯ ವರದಿಯಲ್ಲಿ ಕಂಡು ಬಂದ ಸರ್ವೆ ನಂಬರ್ ಗಳ ಬೆಳೆ ವಿಮೆಯಡಿ ನೋಂದಾಯಿಸಿದ ಪ್ರಸ್ತಾವನೆಗಳಿಗೆ ವಿನಾಯಿತಿ ಇರುವುದಿಲ್ಲ.

2. ಬೆಳೆಯ ವಿಸ್ತೀರ್ಣದ ಮಾಹಿತಿ: ಬೆಳೆ ಸಮೀಕ್ಷೆಯ ವರದಿಯಲ್ಲಿ ದಾಖಲಾದ ಬೆಳೆಯ ಹೆಸರಿನ ಜೊತೆಗೆ ಬೆಳೆ ಸಮೀಕ್ಷೆಯ ವರದಿಯಲ್ಲಿ ದಾಖಲಾದ ಬೆಳೆಯ ವಿಸ್ತೀರ್ಣವನ್ನೂ ಪರಿಗಣಿಸಿ ಹೊಂದಾಣಿಕೆ ಮಾಡಲಾಗುವುದು. ವಿಮೆ ಮಾಡಿಸಲಾದ ವಿಸ್ತೀರ್ಣಕ್ಕಿಂತ ಬೆಳೆ ಸಮೀಕ್ಷೆಯ ಪ್ರಕಾರ ಬಿತ್ತನೆ ಮಾಡಿದ ವಿಸ್ತೀರ್ಣವು ಕಡಿಮೆಯಿದ್ದಲ್ಲಿ ಗರಿಷ್ಠ 25% ಅಥವಾ 1 ಎಕರೆ ಹೆಚ್ಚುವರಿ ಪ್ರದೇಶದವರಿಗೆ ಮಾತ್ರ ವಿನಾಯಿತಿಯಿರುತ್ತದೆ.

   ಉದಾಹರಣೆ:

   - ವಿಮೆ ಮಾಡಿಸಲಾದ ವಿಸ್ತೀರ್ಣವು 2 ಎಕರೆ ಆಗಿದ್ದು, ಬೆಳೆ ಸಮೀಕ್ಷೆಯ ಪ್ರಕಾರ ಬಿತ್ತನೆ ಮಾಡಿದ ವಿಸ್ತೀರ್ಣವು 1 ಎಕರೆ ಆಗಿದ್ದರೆ, ಬೆಳೆ ಸಮೀಕ್ಷೆಯಲ್ಲಿ ದಾಖಲಾದ ಬಿತ್ತನೆ ವಿಸ್ತೀರ್ಣಕ್ಕಿಂತ ಗರಿಷ್ಠ ಶೇಕಡಾ 25 ರಷ್ಟು ಹೆಚ್ಚುವರಿ ವಿಸ್ತೀರ್ಣಕ್ಕೆ, ಅಂದರೆ ಗರಿಷ್ಠ 1.25 ಎಕರೆಯವರೆಗೆ ಪರಿಹಾರವನ್ನು ವಿಸ್ತರಿಸಲಾಗುವುದು.

   - ವಿಮೆ ಮಾಡಿಸಲಾದ ವಿಸ್ತೀರ್ಣವು ಹೆಚ್ಚಾಗಿದ್ದರೆ, ವಿಮೆ ಮಾಡಿಸಲಾದ ವಿಸ್ತೀರ್ಣವು 20 ಎಕರೆ ಆಗಿದ್ದು, ಬೆಳೆ ಸಮೀಕ್ಷೆಯ ಪ್ರಕಾರ ಬಿತ್ತನೆ ಮಾಡಿದ ವಿಸ್ತೀರ್ಣವು 10 ಎಕರೆ ಆಗಿದ್ದರೆ, ಪರಿಹಾರವನ್ನು ಬಿತ್ತನೆ ವಿಸ್ತೀರ್ಣದ ಶೇಕಡಾ 25 ಕ್ಕಿಂತ ಹೆಚ್ಚು ಅಥವಾ 1 ಎಕರೆ, ಇವೆರಡರಲ್ಲಿ ಯಾವುದು ಕಡಿಮೆಯೋ ಅಷ್ಟಕ್ಕೆ ಸೀಮಿತಗೊಳಿಸಲಾಗುವುದು. ಅಂದರೆ 10+1=11 ಎಕರೆಗಳನ್ನು ಪರಿಗಣಿಸಲಾಗುವುದು.

3. ಬೆಳೆ ವಿಮೆ ಪ್ರಸ್ತಾವನೆಗಳಲ್ಲಿ ಯಾವುದಾದರೂ ಒಂದು ಹಿಸ್ಸಾದಲ್ಲಿ ವಿಮೆಗೆ ನೋಂದಾಯಿಸಿದ್ದು, ಬೆಳೆ ಸಮೀಕ್ಷೆ ಪ್ರಕಾರ ಅದೇ ಹಿಸ್ಸಾದಲ್ಲಿ ಬೆಳೆ ಬೆಳೆದಿದ್ದಲ್ಲಿ ಮಾತ್ರ ಪರಿಗಣಿಸಲಾಗುವುದು. ಒಂದು ವೇಳೆ ನೋಂದಾಯಿತ ಬೆಳೆಯು ಅದೇ ಸರ್ವೆ ನಂಬರ್ ನ ಇತರೆ ಹಿಸ್ಸಾಗಳಲ್ಲಿ ಕಂಡು ಬಂದಲ್ಲಿ, ಅಂತಹ ಪ್ರಸ್ತಾವನೆಗಳಿಗೆ ವಿನಾಯಿತಿ ಇರುವುದಿಲ್ಲ.

4. ಬೆಳೆ ವಿಮೆಯಡಿ ಒಂದು ಪ್ರಸ್ತಾವನೆಯಲ್ಲಿ ಒಂದಕ್ಕಿಂತ ಹೆಚ್ಚು ಸರ್ವೇ ನಂಬರ್ ಗಳು ಇದ್ದಲ್ಲಿ, ಬೆಳೆ ವಿಮೆಯಡಿ ನೊಂದಾಯಿಸಲ್ಪಟ್ಟ ಎಲ್ಲಾ ಸರ್ವೆ ನಂಬರ್ ಗಳಲ್ಲೂ ಸಹ ಬೆಳೆ ಸಮೀಕ್ಷೆ ಪ್ರಕಾರ ಬೆಳೆ ದಾಖಲಾದಲ್ಲಿ ಮಾತ್ರ ಪರಿಗಣಿಸಲಾಗುವುದು. ಒಂದು ವೇಳೆ ಯಾವುದೇ ಒಂದು ಸರ್ವೆ ನಂಬರ್ ನಲ್ಲಿ ನೊಂದಾಯಿಸಿದ ಬೆಳೆಯು ಬೆಳೆ ಸಮೀಕ್ಷೆಯಲ್ಲಿ ದಾಖಲಾದ ಬೆಳೆಯೊಂದಿಗೆ ತಾಳೆಯಾಗದಿದ್ದಲ್ಲಿ ಅಂತಹ ಸರ್ವೇ ನಂಬರ್ ಗಳನ್ನು ಬೆಳೆ ವಿಮೆ ಪರಿಹಾರಕ್ಕಾಗಿ ಅರ್ಹವಲ್ಲವೆಂದು ಪರಿಗಣಿಸತಕ್ಕದ್ದು.

5. ಯಾವುದೇ ಗ್ರಾಮದ ಗಣಕೀಕೃತ ಗ್ರಾಮ ನಕ್ಷೆ ಲಭ್ಯತೆ ಇಲ್ಲದಿದ್ದಲ್ಲಿ/ Geo-referenced map ಇಲ್ಲದಿದ್ದಲ್ಲಿ/ ಗ್ರಾಮ ನಕ್ಷೆ ಬೆಳೆ ಸಮೀಕ್ಷೆಗೆ ಬಳಕೆ ಮಾಡದಿದ್ದಲ್ಲಿ, ವಿಮೆಗೆ ನೋಂದಾಯಿಸಿದ ಬೆಳೆಯನ್ನು ಬೆಳೆ ಸಮೀಕ್ಷೆ ವರದಿಯೊಂದಿಗೆ ಹೋಲಿಸಿ ಪರಿಗಣಿಸಲು ಸಾಧ್ಯವಿರುವುದಿಲ್ಲ. ಅಂತಹ ಸಂದರ್ಭದಲ್ಲಿ, ಅಂತಹ ಗ್ರಾಮಗಳ ಎಲ್ಲಾ ಪ್ರಸ್ತಾವನೆಗಳನ್ನು ಸಂಪೂರ್ಣವಾಗಿ ಸಿಂಧುವೆಂದು ಪರಿಗಣಿಸತಕ್ಕದ್ದು.

6. ಬೆಳೆ ಸಮೀಕ್ಷೆಯಲ್ಲಿ ಒಂದು ಭಾಗದಲ್ಲಿ "ಕೃಷಿಯೇತರ ಭೂಮಿ" ಇದ್ದು, ಉಳಿದ ಭಾಗಗಳಲ್ಲಿ ಬೆಳೆ ಬೆಳೆದಿದ್ದರೆ ಅಂತಹ ಪ್ರಸ್ತಾವನೆಗಳಲ್ಲಿನ ಬೆಳೆಗಳು ಯಾವುದಾದರು ವಿನಾಯತಿಗಳ ಅಡಿಯಲ್ಲಿ ಬಂದಲ್ಲಿ ಅಂತಹ ಪ್ರಸ್ತಾವನೆಗಳನ್ನು ಸಿಂಧುವೆಂದು ಪರಿಗಣಿಸತಕ್ಕದ್ದು.

7. ಬೆಳೆ ಸಮೀಕ್ಷೆ ವರದಿಯಲ್ಲಿರುವ ಬೆಳೆ ಹಾಗೂ ವಿಮೆಗೆ ನೋಂದಾಯಿಸಿದ ಬೆಳೆಯನ್ನು ಹೋಲಿಕೆ ಮಾಡಿದಾಗ ನೀರಾವರಿ ಪ್ರಕಾರವನ್ನು (ಮಳೆಯಾಶ್ರಿತ ಅಥವಾ ನೀರಾವರಿ) ಪರಿಗಣಿಸಲಾಗುವುದಿಲ್ಲ.

8. ಬಿತ್ತನೆ ವೈಫಲ್ಯದಿಂದ Prevented Sowing risk ಘೋಷಿಸಿದಲ್ಲಿ, ಸದರಿ ವಿಮಾ ಘಟಕದಲ್ಲಿ ಬೆಳೆ ಬಿತ್ತನೆಯಾಗಿರುವುದಿಲ್ಲ ಮತ್ತು ವಿಮೆಗೆ ನೋಂದಾಯಿಸಿದ ಬೆಳೆಯನ್ನು ಬಿತ್ತನೆ ಮಾಡುವ ಯಾವುದೇ ಸಾಧ್ಯತೆಗಳಿರುವುದಿಲ್ಲ. ಇದಲ್ಲದೆ ಅಂತಹ ಪ್ರಸ್ತಾವನೆಗಳಿಗೆ ಬೆಳೆ ಹಂಗಾಮಿಗಿಂತ ಮುಂಚಿತವಾಗಿಯೇ ವಿಮೆ ಇತ್ಯರ್ಥಪಡಿಸಲಾಗಿರುತ್ತದೆ.

9. ವಿಮಾ ಘಟಕದಡಿ ವಿಮೆಗೆ ನೋಂದಾಯಿಸಿದ ಬೆಳೆಯನ್ನು "ಮಧ್ಯಂತರ ಪ್ರತಿಕೂಲತೆಗಳು/ವಿಪತ್ತುಗಳು" ಅಡಿ ಬೆಳೆ ವಿಮೆ ಪರಿಹಾರಕ್ಕಾಗಿ ಪರಿಗಣಿಸಿದ್ದಲ್ಲಿ, ಅಂತಹ ಪ್ರಸ್ತಾವನೆಗಳನ್ನು ಬೆಳೆ ಸಮೀಕ್ಷೆ ಮಾಹಿತಿಯೊಂದಿಗೆ ಹೋಲಿಕೆ ಮಾಡದೆ ಸಿಂಧುವೆಂದು ಪರಿಗಣಿಸತಕ್ಕದ್ದು.

10. ಕ್ರಮ ಸಂಖ್ಯೆ 9 ರಲ್ಲಿ ಮಧ್ಯಂತರ ಪ್ರತಿಕೂಲ ಬಂದಂತಹ/ ಅನುಭವಿಸುವಂತಹ ಪ್ರಕರಣಗಳಿಗೆ ವಿನಾಯಿತಿ ನೀಡಿದಂತೆ Localized calamity ಮತ್ತು ಕೊಯ್ಲಿನೋತ್ತರ ಪ್ರತಿಕೂಲಗಳಡಿ (Post harvest Loss) ಪರಿಗಣಿಸಲಾಗುವ ಪ್ರಸ್ತಾವನೆಗಳನ್ನು ಬೆಳೆ ಸಮೀಕ್ಷೆ ಮಾಹಿತಿಯೊಂದಿಗೆ ಹೋಲಿಕೆ ಮಾಡದೆ ಸಿಂಧುವೆಂದು ಪರಿಗಣಿಸತಕ್ಕದ್ದು.

11. ಬಹುವಾರ್ಷಿಕ ಬೆಳೆಗಳಿಗೆ ಸಂಬಂಧಿಸಿದಂತೆ, ನೋಂದಣಿ ಸಮಯದಲ್ಲಿಯೇ ಬೆಳೆ ವಿಮೆಯಡಿ ನೋಂದಾಯಿತ ಬೆಳೆಯನ್ನು ಬೆಳೆ ಸಮೀಕ್ಷೆ ವರದಿಯೊಂದಿಗೆ ತಾಳೆಮಾಡಿಕೊಳ್ಳಲಾಗುವುದು.

ಬೆಳೆ ಸಮೀಕ್ಷೆಯೊಂದಿಗೆ ತಾಳೆಯಾಗದ ಹಾಗೂ ಯಾವುದೇ ವಿನಾಯಿತಿ ದೊರಕದ ಪ್ರಸ್ತಾವನೆಗಳನ್ನು ಪರಿಶೀಲನೆಗೆ ಒಳಪಡಿಸಬೇಕಾಗಿದ್ದು, ಸದರಿ ಪ್ರಕ್ರಿಯೆಯ ಪ್ರಮಾಣಿತ ಕಾರ್ಯವಿಧಾನ (SOP) ಈ ಕೆಳಗಿನಂತಿರುತ್ತದೆ.

1. ಸಾಲ ಪಡೆದ ರೈತರ ಪ್ರಕರಣಗಳನ್ನು ಸಂಬಂಧಪಟ್ಟ ಬ್ಯಾಂಕ್ ಶಾಖೆಗಳು ಹಾಗೂ ಸಾಲ ಪಡೆಯದ ರೈತರ ಪ್ರಕರಣಗಳನ್ನು ಕೃಷಿ ಬೆಳೆಗಳಿಗೆ ತಾಲ್ಲೂಕು ಕೃಷಿ ಅಧಿಕಾರಿಗಳು ಮತ್ತು ತೋಟಗಾರಿಕೆ ಬೆಳೆಗಳಿಗೆ ತಾಲ್ಲೂಕು ತೋಟಗಾರಿಕೆ ಅಧಿಕಾರಿಗಳು ಪರಿಶೀಲನೆ ಮಾಡುವುದು.

- ಪರಿಶೀಲನಾ ಅಧಿಕಾರಿಗಳು ಬೆಳೆ ಸಮೀಕ್ಷೆ ವಿವರ ಮತ್ತು ಛಾಯಾಚಿತ್ರವನ್ನು ಪರಿಶೀಲಿಸಿ ಒಂದು ವೇಳೆ ವಿಮೆಗೆ ನೋಂದಾಯಿಸಿದ ಬೆಳೆ ಛಾಯಾಚಿತ್ರದಲ್ಲಿ ಕಂಡುಬಂದಲ್ಲಿ, ಅಂತಹ ಪ್ರಸ್ತಾವನೆಗಳನ್ನು ಸಿಂಧುವೆಂದು ಪರಿಗಣಿಸಿ ಸ್ವೀಕರಿಸಲು ವಿಮಾ ಸಂಸ್ಥೆಯವರಿಗೆ ಶಿಫಾರಸ್ಸು ಮಾಡುವುದು.
- ಒಂದು ವೇಳೆ ಬೆಳೆ ಸಮೀಕ್ಷೆ ಛಾಯಾಚಿತ್ರದಲ್ಲಿ ವಿಮೆಗೆ ಒಳಪಟ್ಟ ಬೆಳೆ ಕಾಣಿಸದೆ ಇದ್ದಲ್ಲಿ ಹಾಗೂ ವಿಮೆಗೆ ನೋಂದಾಯಿಸಿದ ಬೆಳೆ ಋತುಮಾನಿಕ ಬೆಳೆಯಾಗಿದ್ದಲ್ಲಿ ತಿರಸ್ಕರಿಸಲು ಶಿಫಾರಸ್ಸು ಮಾಡುವುದು ಮತ್ತು ವಿಮೆಗೆ ನೋಂದಾಯಿಸಿದ ಬೆಳೆ ಬಹು ವಾರ್ಷಿಕ ಬೆಳೆಯಾದಲ್ಲಿ Mobile App ಮೂಲಕ ಕ್ಷೇತ್ರ ಪರಿಶೀಲನೆ ಕೈಗೊಂಡು ವಿಮಾ ಬೆಳೆ ಬೆಳೆದಿದ್ದಲ್ಲಿ ಸಿಂಧುವೆಂದು ಪರಿಗಣಿಸಲು ಶಿಫಾರಸ್ಸು ಮಾಡುವುದು ಇಲ್ಲದಿದ್ದಲ್ಲಿ ತಿರಸ್ಕರಸಲು ಶಿಫಾರಸ್ಸು ಮಾಡುವುದು.
- ಬೆಳೆ ಸಮೀಕ್ಷೆಯೊಂದಿಗೆ ತಾಳೆಯಾಗದ ಹಾಗೂ ಯಾವುದೇ ವಿನಾಯಿತಿ ದೊರಕದ ಪ್ರಸ್ತಾವನೆಗಳನ್ನು ಪರಿಶೀಲನೆ ಮಾಡಿ ಅಂತಹ ಪ್ರಕರಣಗಳನ್ನು **~~ಈ ಕೆಳಕಂಡ~~ ಕಾಲಾವಧಿಯಲ್ಲಿ** ಇತ್ಯರ್ಥಪಡಿಸುವುದು

a) ಪ್ರಸ್ತಾವನೆಗಳನ್ನು ಪರಿಶೀಲಿಸಲು ಸಂರಕ್ಷಣೆ ತಂತ್ರಾಂಶದಲ್ಲಿ ವಿಮಾ ಸಂಸ್ಥೆಯವರ login ನಿಂದ ಬ್ಯಾಂಕ್ ಶಾಖೆಯ ವ್ಯವಸ್ಥಾಪಕರು (ಸಾಲ ಪಡೆದ ರೈತರ ಪ್ರಸ್ತಾವನೆಗಳು) ಹಾಗೂ ಕೃಷಿ ಅಧಿಕಾರಿಗಳ (ಸಾಲ ಪಡೆಯದ ರೈತರ ಪ್ರಸ್ತಾವನೆಗಳು) login ಗೆ ವರ್ಗಾವಣೆಯಾದ ದಿನಾಂಕದಿಂದ 15 ದಿನಗಳ ಕಾಲವಕಾಶ ಹಾಗೂ ಬಹುವಾರ್ಷಿಕ ಬೆಳೆಗಳಲ್ಲಿ ಪರಿಶೀಲನಾಧಿಕಾರಿ login (ಬ್ಯಾಂಕ್/ ತೋಟಗಾರಿಕೆ ಅಧಿಕಾರಿ) ಗೆ ವರ್ಗಾವಣೆಯಾದ ದಿನಾಂಕದಿಂದ 45 ದಿನಗಳ ಕಾಲಾವಕಾಶ.

b) ಪರಿಶೀಲಿಸಿದ ಪ್ರಸ್ತಾವನೆಗಳನ್ನು ವಿಮಾ ಸಂಸ್ಥೆಗಳಿಗೆ ವರ್ಗಾಯಿಸಿದ ದಿನಾಂಕದಿಂದ ವಿಮಾ ಸಂಸ್ಥೆಯು ಪ್ರಸ್ತಾವನೆಗಳನ್ನು ಅಂಗೀಕರಿಸಲು / ತಿರಸ್ಕರಿಸಲು ವಾರ್ಷಿಕ ಬೆಳೆಗಳಿಗೆ 7 ದಿನದ ಕಾಲಾವಕಾಶ ಮತ್ತು ಬಹುವಾರ್ಷಿಕ ಬೆಳೆಗಳಿಗೆ 7 ದಿನಗಳ ಕಾಲಾವಕಾಶ.

c) ವಿಮಾ ಸಂಸ್ಥೆಯು ಅಂಗೀಕರಿಸಿದ ಪ್ರಸ್ತಾವನೆಗಳಿಗೆ ಬೆಳೆ ವಿಮೆ ಪರಿಹಾರ ಮೊತ್ತವನ್ನು ವಿಮೆ ವಿಭಾಗದ ಅಧಿಕಾರಿಗಳಿಂದ claim initiate ಮಾಡಲು 15 ದಿನಗಳ ಕಾಲಾವಕಾಶ.

d) Claim initiate ಮಾಡಿದ ಪ್ರಸ್ತಾವನೆಗಳಿಗೆ ವಿಮಾ ಸಂಸ್ಥೆಯು ಬೆಳೆ ವಿಮೆ ಪರಿಹಾರ ಮೊತ್ತವನ್ನು ರೈತರಿಗೆ ಪಾವತಿಸಲು 15 ದಿನಗಳ ಕಾಲವಕಾಶ.

e) ವಿಮಾ ಸಂಸ್ಥೆಯು ತಿರಸ್ಕರಿಸಿದ ಪ್ರಸ್ತಾವನೆಗಳ ಪಟ್ಟಿಯನ್ನು ಪ್ರಕಟಿಸಿದ ನಂತರ ರೈತರು ದೂರನ್ನು ಸಲ್ಲಿಸಲು (ಮೇಲೆ ಓದಲಾದ (1) ರ ಆದೇಶದ ಕ್ರಮ ಸಂಖ್ಯೆ 8.5 ರಲ್ಲಿ ತಿಳಿಸಿರುವಂತೆ) 15 ದಿನಗಳ ಕಾಲವಕಾಶ.

f) ರೈತರು ದೂರನ್ನು ಸಲ್ಲಿಸಿದ ನಂತರ ಪರಿಶೀಲನಾ ಸಮಿತಿ ಪ್ರಕರಣಗಳನ್ನು ತೀರ್ಮಾನಿಸಲು 15 ದಿನಗಳ ಕಾಲವಕಾಶ.

g) ಪರಿಶೀಲನಾ ಸಮಿತಿಯು ಪ್ರಕರಣದ ತೀರ್ಮಾನವನ್ನು ವರದಿ ಮಾಡಿದ ದಿನಾಂಕದಿಂದ ಮೇಲ್ಮನವಿ ಸಮಿತಿಗೆ ದೂರು ಸಲ್ಲಿಸಲು 7 ದಿನಗಳ ಕಾಲವಕಾಶ.

h) ಮೇಲೆ ಓದಲಾದ (1) ರ ಆದೇಶದ ಕ್ರಮ ಸಂಖ್ಯೆ 8.7 ರಲ್ಲಿ ತಿಳಿಸಿರುವಂತೆ ಮೇಲ್ಮನವಿ ಸಮಿತಿಗೆ ದೂರು ಸಲ್ಲಿಸಿದ ನಂತರ ಪ್ರಸ್ತಾವನೆಯನ್ನು ಪರಿಶೀಲಿಸಿ ಇತ್ಯರ್ಥಪಡಿಸಲು 15 ದಿನಗಳ ಕಾಲವಕಾಶ.

i) ಮೇಲ್ಮನವಿ ಸಮಿತಿಯ ನಿರ್ಧಾರವು ಅಂತಿಮವಾಗಿದ್ದು, ಎಲ್ಲಾ ಸಂಬಂಧಿತ ಪಾಲುದಾರರು/ ಮಧ್ಯಸ್ಥದಾರರು ಇದಕ್ಕೆ ಬದ್ಧರಾಗಿರತಕ್ಕದ್ದು.

2. ಬೆಳೆ ಸಮೀಕ್ಷೆ ವರದಿಯನ್ವಯ ಹಾಗೂ ಮೇಲೆ ತಿಳಿಸಿದ ಯಾವುದೇ ವಿನಾಯಿತಿಯಡಿ ಒಳಪಡಲಾರದ ಪ್ರಸ್ತಾವನೆಗಳಿಗೆ ಬೆಳೆ ಸಮೀಕ್ಷೆಯಲ್ಲಿ ದಾಖಲಾದ ಬೆಳೆ ಹಾಗೂ ಬೆಳೆ ವಿಮೆಯಡಿ ನೊಂದಾಯಿತ ಬೆಳೆಯು ತಾಳೆಯಾಗದ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ ರೈತರ ವಂತಿಗೆಯನ್ನು ಈ ಹಿಂದೆ ರೈತರಿಗೆ ಮರುಪಾವತಿಸಲಾಗುತ್ತಿದ್ದು, ಇನ್ನು ಮುಂದೆ ಕೇಂದ್ರ ಸರ್ಕಾರದ ಆದೇಶದನ್ವಯ ಮುಟ್ಟುಗೋಲು ಹಾಕಿಕೊಂಡು ಕೇಂದ್ರ ಸರ್ಕಾರದ Technology Fund ನಲ್ಲಿ ಜಮೆ ಮಾಡಿಕೊಳ್ಳಲಾಗುವುದು.

3. ಯಾವುದೇ ಜಿಲ್ಲೆಯ ಜಿಲ್ಲಾಧಿಕಾರಿಗಳಿಂದ ಬೆಳೆ ಸಮೀಕ್ಷೆ ಮತ್ತು ಬೆಳೆ ವಿಮೆ ತಾಳೆ ಮಾಡುವುದರಲ್ಲಿ ಯಾವುದಾದರೂ ವಿಶೇಷ ವರದಿ ಸ್ವೀಕೃತವಾದಲ್ಲಿ ಅದರನ್ವಯ ಸಂರಕ್ಷಣೆ ತಂತ್ರಾಂಶದ crop survey integration ಪ್ರಕ್ರಿಯೆಯಲ್ಲಿ ಅವಶ್ಯ ಮಾರ್ಪಾಡುಗಳನ್ನು ಕೈಗೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

D. Mary Velangani

(ಡಿ ಮೇರಿ ವೆಲಾಂಗನಿ)
ಸರ್ಕಾರದ ಉಪ ಕಾರ್ಯದರ್ಶಿ-3,
ಕೃಷಿ ಇಲಾಖೆ.
30/6/26

ಇವರಿಗೆ,

1. ಮಹಾಲೇಖಪಾಲರು (ಎ&ಇ)/(ಜಿ&ಎಸ್.ಎಸ್.ಎ)/(ಇ&ಆರ್.ಎಸ್.ಎ), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ ಮತ್ತು ಯುಪಿಓಆರ್), ಬಹುಮಹಡಿ ಕಟ್ಟಡ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ (ಇ-ಆಡಳಿತ), ಬಹು ಮಹಡಿಗಳ ಕಟ್ಟಡ, ಬೆಂಗಳೂರು.

5. ಸರ್ಕಾರದ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6. ರಾಜ್ಯ ಮಟ್ಟದ ಬೆಳೆ ವಿಮಾ ಸಮನ್ವಯ ಸಮಿತಿಯ ಎಲ್ಲಾ ಸದಸ್ಯರಿಗೆ.
7. ಆಯುಕ್ತರು, ಕೃಷಿ ಇಲಾಖೆ, ಬೆಂಗಳೂರು.
8. ಆಯುಕ್ತರು, ಭೂಮಿ ಉಸ್ತುವಾರಿ ಕೇಂದ್ರ, ಬೆಂಗಳೂರು.
9. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್ ಬಾಗ್, ಬೆಂಗಳೂರು.
10. ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
11. ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು.
12. ನಿರ್ದೇಶಕರು (ಪಿಎಫ್‌ಡಿ), ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
13. ನಿರ್ದೇಶಕರು, ಕೆ.ಎಸ್.ಎನ್.ಡಿ.ಎಂ.ಸಿ, ಯಲಹಂಕ, ಬೆಂಗಳೂರು - ಆಯುಕ್ತರು, ತೋಟಗಾರಿಕೆ ಇಲಾಖೆ ಇವರ ಮುಖಾಂತರ.
14. ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು.
15. ಕನ್ವೀನರ್, ಎಸ್.ಎಲ್.ಬಿ.ಸಿ, ಬೆಂಗಳೂರು
16. ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್, ಬೆಂಗಳೂರು
17. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು – ಆಯುಕ್ತರು, ಕೃಷಿ ಇಲಾಖೆ ಮುಖಾಂತರ
18. ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್- ಆಯುಕ್ತರು, ಕೃಷಿ ಇಲಾಖೆ ಇವರ ಮುಖಾಂತರ
19. ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು- ಆಯುಕ್ತರು, ಕೃಷಿ ಇಲಾಖೆ ಇವರ ಮುಖಾಂತರ
20. ಎಲ್ಲಾ ಜಿಲ್ಲಾ ತೋಟಗಾರಿಕೆ ಉಪ ನಿರ್ದೇಶಕರು (ಜಿ.ಪಂ)-ನಿರ್ದೇಶಕರು, ತೋಟಗಾರಿಕೆ ಇಲಾಖೆ ಮುಖಾಂತರ
21. ಎಲ್ಲಾ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು - ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಇವರ ಮುಖಾಂತರ
22. ಎಲ್ಲಾ ಲೀಡ್ ಬ್ಯಾಂಕುಗಳು – ಎಸ್.ಎಲ್.ಬಿ.ಸಿ. ಮುಖಾಂತರ.
23. ಎಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು- ಅಪೆಕ್ಸ್ ಬ್ಯಾಂಕ್‌ನ ಮುಖಾಂತರ.
24. ಎಲ್ಲಾ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು– ಎಸ್.ಎಲ್.ಬಿ.ಸಿ. ಮುಖಾಂತರ
25. ಎಲ್ಲಾ ನೋಡಲ್ ಬ್ಯಾಂಕುಗಳು – ಎಸ್.ಎಲ್.ಬಿ.ಸಿ. ಮುಖಾಂತರ
26. ಪ್ರಾದೇಶಿಕ ವ್ಯವಸ್ಥಾಪಕರು, ಅಗ್ರಿಕಲ್ಚರ್ ಇನ್ಶೂರೆನ್ಸ್ ಕಂಪನಿ ಆಫ್ ಇಂಡಿಯಾ ಲಿಮಿಟೆಡ್, ಕರ್ನಾಟಕ ಪ್ರಾದೇಶಿಕ ಕಛೇರಿ, ಕರ್ನಾಟಕ ಪ್ರದೇಶ ಕೃಷಿಕ ಸಮಾಜ, ನಂ.18, 3ನೇ ಮಹಡಿ, ನೃಪತುಂಗ ರಸ್ತೆ, ಹಡ್ಸನ್ ವೃತ್ತ, ಬೆಂಗಳೂರು.
27. ಎಲ್ಲಾ ಅನುಮೋದಿತ ಬೆಳೆ ವಿಮಾ ಕಂಪನಿಗಳು.
28. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ -4), ಬೆಂಗಳೂರು.
29. ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ)/(ಭೂಮಿ ಮತ್ತು ಯುಪಿಓಆರ್), ಬಹುಮಹಡಿ ಕಟ್ಟಡ, ಬೆಂಗಳೂರು.
30. ಶಾಖಾರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಪ್ರತಿ:

1. ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿ-1, 2, 3, ಕೃಷಿ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.